ಪರಸ್ಪರ ಯುದ್ಧ ಮಾಡುತ್ತಿರುವ ರೀತಿ.

ನಾನು ಪ್ರಜೆಗಳ ಅರಮನೆಯ ಬಗ್ಗೆ ತಿಳಿದುಕೊಳ್ಳಲು, ಇತಿಹಾಸಕಾರ ಅಲೆಗ್ಸಾಂಡ್ರೋ ಮುರಾದ್ ಮಿರಾನೊವ್ ಅವರನ್ನು ಭೇಟಿ ಮಾಡಿದಾಗ ಅವರು ಕೇಳಿದ್ದರು: 'ನೀವು ಬೆಲ್‌ಗ್ರೇಡ್‌ಗೆ ಹೋಗಿದ್ದೀರೇನು?'

'ಹೌದು' ನಾನೆಂದೆ.

'ಅವರೂ ಅಗಾಧತೆಯ ಹಿಂದೆ ಹೋಗಿ ಸಂತ ಸಾವಾ ಚರ್ಚ್ ಕಟ್ಟುತ್ತಿದ್ದಾರೆ, ಅದು ಯೂರೋಪಿನಲ್ಲೇ ದೊಡ್ಡದಾದ ಚರ್ಚ್.'

ನಾನೆಂದೆ: 'ಹೂಂ. ಅದಿನ್ನೂ ಮುಗಿದಿಲ್ಲ. ಒಳಗಿಂದ ಖಾಲಿ. ಬರೀ ಗಾಳಿ ಬೀಸುತ್ತದೆ ಅಲ್ಲಿ.'

ಗಣರಾಜ್ಯದ ಅರಮನೆಯೂ ಮುಗಿದಿಲ್ಲ. ಈ ಹೆಸರೂ ನನಗೆ ರೂಢಿಯಾಗಿದೆ. ಮೊದಲಿಗೆ ಪ್ರಜೆಗಳ ಸಮುದಾಯ ಭವನವೆಂದಿದ್ದ ಈ ಅರಮನೆ ಈಗ ಗಣರಾಜ್ಯದ ಅರಮನೆಯಾಗಿದೆ.

ಇದೇ ರೀತಿ ಒಂದು ನಗರದ ದಂತಕತೆ ಶುರುವಾಗುವುದೋ ಏನೋ? ಒಂದು ಚೂರು ಗಾಸಿಪ್, ಎಲ್ಲೋ ಆಡಿದ ಪಿಸುಮಾತು. ಚೌಸೆಸ್ಕೋ ಈ ಅರಮನೆಯನ್ನು ಹೇಗೆ ಪ್ರಾರಂಭಿಸಿದರು ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ. ಒಂದು ಟಿಪ್ಪಣಿ, ಒಂದು ದಾಖಲೆ, ಕಾಗದ ಪತ್ರ. ಒಂದೂ ಇಲ್ಲ. ಆಯ್ದ ಕೆಲವು ವಾಸ್ತುಶಿಲ್ಪಿಗಳನ್ನು ಬರಹೇಳಲಾಯಿತು ಮತ್ತು ನಾಯಕರು ನಗರದ ಈ ಭಾಗವನ್ನು ಸ್ವಲ್ಪ ಬದಲಾಯಿಸಬೇಕೆಂದಿದೆಯೆಂದು ಹೇಳಲಾಯಿತು. ಕೆಲವು ಕಟ್ಟಡಗಳನ್ನು ನೆಲಸಮ ಮಾಡಬೇಕಾದೀತು. ಆದರೆ ಗುರಿ ಮಾತ್ರ ದೊಡ್ಡ ಬದಲಾವಣೆ ತರುವಂಥದ್ದಾಗಿರಬೇಕು. ನಿಮ್ಮ ಅಭಿಪ್ರಾಯಗಳನ್ನು ಮತ್ತು ಯೋಜನೆಗಳನ್ನು ಹಂಚಿಕೊಳ್ಳಲು ನಿಮ್ಮನ್ನು ಆತ್ಮೀಯವಾಗಿ ಆಹ್ವಾನಿಸಲಾಗಿದೆ.

ಎರೆಹುಳುಗಳ ಆಮಿಷಕ್ಕೆ ಮೀನುಗಳು ಬಿದ್ದೇ ಬಿದ್ದವು. ಚೌಸೆಸ್ಕೋ ಅವರಿಗೆ ನಗರದ ಹದಿನೆಂಟು ಮಾದರಿಗಳನ್ನು ತೋರಿಸಲಾಯಿತು. ನಾಯಕರು ಅವೆಲ್ಲವನ್ನೂ ಒಂದೊಂದಾಗಿ ನೋಡಿ ತಲೆಯಲ್ಲಾಡಿಸಿದರು. ಸೀಝುರ್ ಲಝಾರೆಸ್ಕ್ಯು ಎಂಬ ವಿಖ್ಯಾತ ವಾಸ್ತುಶಿಲ್ಪಿಯ ಮಾದರಿ ನಾಯಕರಿಗೆ ಇಷ್ಟವಾಯಿತು. ಸೀಝುರ್ ಅವರು ಅವರ ವಾಸ್ತು ಶಿಲ್ಪಿ ಸ್ನೇಹಿತರು ಅವರ ಮಾದರಿಗಳನ್ನು ಬಿಟ್ಟುಕೊಡುವಂತೆ ಮಾಡುವುದರಲ್ಲಿ ಯಶಸ್ವಿಯೂ ಆದರು. ಆದರೆ ಆಗ ಅವಳು ರಂಗಕ್ಕೆ ಕಾಲಿರಿಸಿದವಳು ಆಂಕಾ ಪೆಟ್ರೆಸ್ಕ್ಯೂ, ಇಪ್ಪತ್ತೆಂಟು ವಯಸ್ಸಿನ, ಆಗ ತಾನೇ ಓದು ಮುಗಿಸಿದ್ದ ವಾಸ್ತು ಶಿಲ್ಪಿ.

ಒಂದು ದಂತಕತೆಯಿದೆ. ಅದರ ಪ್ರಕಾರ, ಪೆಟ್ರೆಸ್ಕ್ಯೂ ಇಡೀ ಅರಮನೆಯ ಒಂದು ಮಾದರಿಯನ್ನು ರಚಿಸಿದ್ದಳು. ಸಣ್ಣ ಕಾರ್ಪೆಟ್‌ಗಳು, ಗಾಜಿನ ದೀಪಗಳು ಮತ್ತು ಪೀಠೋಪಕರಣಗಳ ಸಹಿತ. ಅದನ್ನು ನೋಡಿದ ಕೂಡಲೇ ಎಲೆನಾ ಮತ್ತು ಚೌಸೆಸ್ಕೋರ ಕಣ್ಣುಗಳು ಆಶ್ಚರ್ಯ ಮತ್ತು ದಿಗ್ಭ್ರಮೆಗಳಿಂದ ಅರಳಿದುವಂತೆ. ಪೆಟ್ರೆಸ್ಕ್ಯೂ ಗೆದ್ದಳು. ಇನ್ನುಳಿದ ವಾಸ್ತುಶಿಲ್ಪಿಗಳು ತಮ್ಮ ತಮ್ಮ ಯೋಜನೆಗಳನ್ನು ವಿವರಿಸಲಿಕ್ಕೆ, ಭೂಪಟ ಮತ್ತು ಡ್ರಾಯಿಂಗ್‌ಗಳನ್ನು ಮಾಡಿದ್ದರಂತೆ. ಆದರೆ ಒಂದು ಕತೆಯ ಪ್ರಕಾರ ಸರ್ವಾಧಿಕಾರಿ ದಂಪತಿಗೆ ಅವುಗಳನ್ನೆಲ್ಲ ಅರ್ಥ ಮಾಡಿಕೊಳ್ಳಲು ಬರುತ್ತಿರಲಿಲ್ಲವಾದ್ದರಿಂದ ಗೊಂಬೆಯಂತೆ ಕಾಣುತ್ತಿದ್ದ, ಕ್ರಿಸ್ಮಸ್ ಕೇಕ್‌ನಂತೆ ಜೋಡಿಸಿಟ್ಟಿದ್ದ ನಗರದ ಮಾದರಿಗೆ ಮನಸೋತರಂತೆ.

ಆದರೆ ಮಿರಾನೋವ್ ಪ್ರಕಾರ ಪೆಟ್ರೆಸ್ಕ್ಯೂ ಒಬ್ಬ ಸಂತನ ತರಹ, ಬಹಳ ತಾಳ್ಮೆಯುಳ್ಳವಳಾದ್ದರಿಂದ ಆ ಪ್ರಾಜೆಕ್ಟ್ ಮುಗಿಯುವ ತನಕ ಇದ್ದಳು. ಚೌಸೆಸ್ಕೋ ಮತ್ತು ಅವರ